ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—33⅓ ಭಾಗ ಅರಣ್ಯ ಪ್ರದೇಶವಿರಬೇಕು, ಅಷ್ಟನ್ನು ಉಳಿಸ ಬೇಕೆಂಬುದು ಆಲ್ ಇಂಡಿಯಾ ಪಾಲಿಸಿ ಎಂದು ಹೇಳಿದರು. ಒಟ್ಟು ರಾಜ್ಯವನ್ನು ತೆಗೆದುಕೊಂಡು ಹಾಗೆ ಮಾಡುತ್ತೀರೋ ಅಥವಾ ಡಿಸ್ಟ್ರಿಕ್ಟ್ ವಾರು ತೆಗೆದುಕೊಳ್ಳುತ್ತೀರೋ ?

ಶ್ರೀ ಬಿ. ರಾಚಯ್ಯ.—ಒಟ್ಟಿಗೆ ತೆಗೆದುಕೊಳ್ಳಬೇಕೆಂದಿದ್ದೇವೆ.

Unauthorised cultivation of gomal lands in Narasimharajapur Taluk in Chickmagalur District.

*Q.—467. Sri DAYANANDA R. KALLE (Karkal).—

Will the Government be pleased to state:—

(*a*) whether it has come to the notice of the Government that Gomal lands are used for unauthorised cultivation during the last six years in Narasimharajapura Taluk in Chickmagalur District;

(*b*) the extent of land so used for unauthorised cultivation;

(*c*) who are the people doing this unauthorised cultivation;

(*d*) whether it has come to the notice of the Government that this kind of unauthorised possession and cultivation is going on in a considerable scale in Malnad areas year by year;

(*e*) what action the Government have taken in this regard?

A.—Sri M. V. KRISHNAPPA (Minister for Revenue).—

(*a*) Yes.

(*b*) 798 acres 2 guntas.

(*c*) Mostly persons from the Kerala State who have migrated to Narasimharajapura Taluk. There are however some local people also who are in unauthorised occupation of such land.

(*d*) Yes.

(*e*) Action is being taken either to sanction the lands to the encroachers or to evict them according to rules.

ಶ್ರೀ ದಯಾನಂದ ಆರ್. ಕಳ್ಳೆ.—ಅನಧಿಕೃತ ಸಾಗುವಳಿ ಮಾಡಿರುವ ವಿಚಾರದಲ್ಲಿ ಏಳೆಂಟು ವರ್ಷಗಳಿಂದ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ.ವಿ. ಕೃಷ್ಣಪ್ಪ.—ಹೋದ ವರ್ಷ ಹೆಚ್ಚು ಜುಲ್ಮಾನೆ ಹಾಕಿ ಎವಿಕ್ಷನ್ ಆರ್ಡರು ಮಾಡಿದೆ. ಹೀಗೆ ರೂಲ್ಸ್ ಪ್ರಕಾರ ಕ್ರಮ ಕೈಕೊಂಡಿದೆ.

ಶ್ರೀ ದಯಾನಂದ ಆರ್. ಕಳ್ಳೆ.—ಎವಿಕ್ಷನ್ ಆರ್ಡರಾದರೂ ಇಲ್ಲಿಯವರೆಗೆ ಜಮೀನು ಬಿಟ್ಟಿಲ್ಲ, ಸ್ಟೇ ಆರ್ಡರ್ ತಂದಿದ್ದಾರೆ ಎಂಬುದು ಗೊತ್ತೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೋದ ಸೆಪ್ಟಂಬರಿನಲ್ಲೇ ಎವಿಕ್ಷನ್ ಆರ್ಡರು ಮಾಡಲಾಯ್ತು. ಆದರೆ ಆ ಪ್ರದೇಶದ ಅಸೆಂಬ್ಲಿ ಸದಸ್ಯರು, ಹಿಂದೆ ರೆವೆನ್ಯೂ ಮಂತ್ರಿಗಳಾಗಿದ್ದವರಲ್ಲಿ ಬಂದು "ನಾವು ಫೈನಲು ಮಾಡುತ್ತೇವೆ, ಆರ್ಡರನ್ನು ತಡೆಹಿಡಿಯಿರಿ" ಎಂದು ಹೇಳಿದ ಮೇಲೆ, ಜವಾಬ್ದಾರಿಯುತ ರಾದ ಅಂಥವರ ಭರವಸೆ ಮೇಲೆ ಆರ್ಡರನ್ನು ತಡೆಹಿಡಿದಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—On a point of order, Sir, ಅಸೆಂಬ್ಲಿಯ ಸದಸ್ಯರು ಮತ್ತು ಹಿಂದಿನ ಮಂತ್ರಿಗಳು ಹೇಳಿದ ಮಾತ್ರಕ್ಕೆ ತಡೆಹಿಡಿಯುವುದೆಂದರೆ ಇದೇನು ಸರ್ಕಾರವೋ ಅಥವಾ ಇನ್ನೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾವು ಎಷ್ಟೋನಲು ಹೇಳಿದರೂ ಸ್ಥಳದವರು ಬಂದು ಬಡವರಿಗೆ ನ್ಯಾಯವಾಗುತ್ತದೆ, ತಡೆಯಿರಿ ಎಂದು ಕೇಳಿಕೊಂಡರೆ ಏನು ಮಾಡುವುದು.

Mr. SPEAKER.—There is no point of order. Has the Hon. Member got any thing in support of it? He raised a point of order says nothing of it. What has he to say in support of the point of order?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸರ್ಕಾರದಲ್ಲಿ ಪಂಚಾಯ್ತಿಗೂ ಅವಕಾಶವುಂಟೆ?

Mr. SPEAKER.—That is not the way to raise a point of order.

ಶ್ರೀ ದಯಾನಂದ ಆರ್. ಕಳ್ಳಿ.—ಈಗ ಸಾಗುವಳಿ ಮಾಡುತ್ತಿರುವವರಿಗೆ ಸಾಗುವಳಿ ಪಾಡುತ್ತಿರುವ ಜಮೀನನ್ನು ಮಂಜೂರು ಮಾಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಇನ್ನೂ ಆ ವಿಚಾರದಲ್ಲಿ ತೀರ್ಮಾನ ಮಾಡಿಲ್ಲ. ಬಗರ್ ಹುಕುಂ ಸಾಗುವಳಿ ಮಾಡುತ್ತಿರುವವರಿಗೆ ಹೆಚ್ಚು ಜುಲ್ಮಾನೆ ಹಾಕಿ ವಸೂಲು ಮಾಡುತ್ತಿದ್ದೇವೆ. ಆದರೂ ಕೆಲವರು ಸಾಗುವಳಿ ಮಾಡುತ್ತಲೇ ಇದ್ದಾರೆ. ಈಗ ಎವಿಕ್ಷನ್ ಮಾಡಬೇಕೆಂದು ಆರ್ಡರ್ ಮಾಡಲಾಗಿದೆ.

ಶ್ರೀ ಬಿ. ಎಚ್. ಗೌಡ.—ಗೋಮಾಳದ ವಿಚಾರದಲ್ಲಿ ನಿರ್ದಿಷ್ಟವಾದ ನೀತಿಯೇನು?

ಶ್ರೀ ಎಂ. ವಿ. ಕೃಷ್ಣಪ್ಪ.—ಮೂರು ಹನುಗಳಿಗೆ ಒಂದು ಎಕರೆಯ ಪ್ರಕಾರ ಗೋಮಾಳವನ್ನು ರಿಸರ್ವ್ ಮಾಡಲೇ ಬೇಕು. ಅಷ್ಟನ್ನು ಯಾರಿಗೂ ಕೊಡಲು ಅವಕಾಶವಿಲ್ಲ. ಅದಕ್ಕಿಂತ ಹೆಚ್ಚಾಗಿದ್ದರೆ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಮಂಜೂರು ಮಾಡಲಾಗುವುದು.

Mr. SPEAKER.—Question time is over.

QUESTIONS FOR ANSWERS ON THE DAY.

(but not taken up)

Limiting the use of Electricity by the Consumers.

*Q.—188. Sri B. CHANNABYRE GOWDA (Hoskote).—

Will the Government be pleased to state :—

(*a*) whether they are aware of the Notices issued by the Electricity Board to the consumers limiting the use of Electrical Energy ;

(*b*) whether they are aware of the conditions imposed therein that the installation would be liable for disconnection if the consumers exceed the limitation fixed ;

(*c*) whether they would consider the alternative method for increasing the charges for excess consumption instead of the above condition ?

A.—Sri S. NIJALINGAPPA (Chief Minister).—

(*a*) Yes.

(*b*) Yes.

(*c*) No. Under the Act, the penslty for exceeding the limitation fixed is prosecution. However, the orders regarding curtailment in the consumption of electricity have been withdrawn in respect of domestic cousumers.